**ಕಥೆ**

# ಸೇವಂತಿ, ಅವ್ನೋ ಇವ್ನೋ



**ಮೀನಾ ಮೈಸೂರು**

ಕಲೆ: ಎಸ್. ವಿ. ಹೂಗಾರ್



ಹಿಂಗೊಂದೂರು. ಆ ಊರೊಳಗ ಸೇವಂತಿ ಅಂಬೋ ಹುಡುಗಿ, ಬಾಳಾ ಮುಗುದೆ. ಬಾಳಾ ಚೂಟಿ ಕೂಡ. ಎಷ್ಟು ಬೇಕಾದರೂ, ಕೆಲಸ ಮಾಡಿಬಿಡ್ತಾಳೆ. ಖುಷಿ ಖುಷಿಯಾಗಿರ್ತಾಳೆ. ಹಳ್ಳಿಯಲ್ಲಿ ಅಪ್ಪ ಅವ್ವರ ಮುಚ್ಚಟೆಯಲ್ಲಿ ಸಂದಾಗೆ ಬೆಳಕೊಂಡಿದ್ಲು. ಹಿಂಗಿರುವಾಗ ಒಂದು ದಿನ... ತಾಳಿ ತಾಳಿ, ಅವಳೇ ಅವಳ ಬಾಳಪುಟವನ್ನು ತೆರೆದಿಡುತ್ತಾ ಹೋಗ್ತಾಳೆ. ಇನ್ನು ಓದುಗ ಪ್ರಭುಗಳಾದ ನೀವುಂಟು, ಅವಳುಂಟು. ಮಧ್ಯ ಈ ಕಥೆಗಾರನಿಗೇನು ಕೆಲಸ ಅಲ್ವಾ? ಓವರ್ ಟು ಸೇವಂತಿ.

ಕತೆಗಾರಣ್ಣ ತುಂಬಾ ಟ್ಯಾಂಕ್ಸು, ನನ್ನ ಕತೆ ನಾನೇ ಹೇಳ್ಕತೀನಿ. ನೀನೀಗ ರೆಸ್ಟು ತಕ್ಕೊ. ಓದುಗರೆ, ಈಗ ನಾನು ನಿಮ್ಮ ಸಂಪರ್ಕಕ್ಕೆ ಬಂದೀವ್ನಿ. ಮಾತಾಡ್ತಾ ಹೋಗ್ಲಾ? ಕೇಳಸ್ಕತೀರಾ...ಸರಿ ಮತ್ತಾ, ನಿಮಗೆಲ್ಲರ‍್ಗುವಾ ನಮಸ್ಕಾರ!

ನಂಗಾಗ 15–16 ವಯಸ್ಸು. ಏಳನೇ ಕ್ಲಾಸು ಫೇಲಾಗಿ ಮನೇಲ್ಲಿದ್ದೆ. ನನ್ನ ಮದ್ವೆ ಮಾಡಬೇಕು ಅಂತ ಅಪ್ಪ ಎಷ್ಟು ದಪ ಪ್ರಯತ್ನಿಸಿದ್ರುವ ಅದ್ಯಾಕೋ ನಂಗೆ ಕಂಕಣ ಬಲ ಕೂಡೇ ಬರ್‍ನಿಲ್ಲ. ಜೊತೆಗೆ ವರದಕ್ಷಿಣೆ ಬೇರೆ, ಪಟ್ಟಣದಲ್ಲಿ ಮದುವೆ ಮಾಡಿಕೊಡಬೇಕೆಂಬೊ ಗಂಡಿನ ಮನೆಯವರ ಬೇಡಿಕೆ ಈಡೇರಿಸೋಕೆ ಅಪ್ಪಂಗೆ ಆಗ್ತಿರಲಿಲ್ಲ. ಹಿಂಗಾಗಿ ಅವ್ವನ ಜೊತೆ ಕಸಮುಸುರೆ ತಿಕ್ಕೋತ್ತಾ ಮನೆ ಒಳ್ಗೆ ಇದ್ದೆ. ನಮ್ಮೂರಿನ ಶ್ರೀಮಂತರಾದ ಪ್ಯಾಟೆ ರಾಮಪ್ಪನವರ ಮಗಳು ಸೌಮ್ಯಕ್ಕ ಮೈಸೂರ್‍ನಲ್ಲಿ ಓದಿ ಕಾಲೇಜನಲ್ಲಿ ಪಾಠ ಮಾಡ್ತಾವರೆ. ಆವಕ್ಕ ಒಂದು ದಿನ ನಮ್ಮ ಮನೆತವಕ ಬಂದು, 'ಸೇವಂತೀನ ಮನೆಯಲ್ಲೇ ಯಾಕೆ ಇಟ್ಟುಕೊಂಡಿದ್ದೀರಿ, ನನ್ನ ಜೊತೆ ಮೈಸೂರಿಗೆ ಕಳ್ಸಿ, ನಮ್ಮ ಪ್ರೊಫೆಸರ್